# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2011-12ನೇ ಸಾಲಿಗೆ ಪದವಿ ಪೂರ್ವ ಮತ್ತು ವೃತ್ತಿ ಶಿಕ್ಷಣ ಇಲಾಖೆಗಳಿಗೆ ಸಂಬಂಧಿಸಿದಂತೆ, ಮುಂದುವರಿಕೆ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಮೊದಲನೇ ತ್ರೈಮಾಸಿಕ ಅನುದಾನ ಬಳಸಿಕೊಳ್ಳಲು ಅನುಮತಿ ನೀಡುವ ಬಗ್ಗೆ.

ಓದಲಾಗಿದೆ:- 1) ಸರ್ಕಾರದ ಆದೇಶ ಸಂಖ್ಯೆ ಇಡಿ 47 ಯೋಯೋಕ 2011, ದಿನಾಂಕ :2-04-2011.

2) ಸರ್ಕಾರದ ಆದೇಶ ಸಂಖ್ಯೆ ಆಇ 1 ಟಿ.ಎಫ್.ಪಿ 2010 ದಿನಾಂಕ :20-04-2010

**ಪ್ರಸ್ತಾವನೆ:-**

1. ಮೇಲೆ (1) ರಲ್ಲಿ ಓದಲಾದ ದಿನಾಂಕ : 02-04-2011 ರ ಸರ್ಕಾರದ ಆದೇಶದಲ್ಲಿ 2011-12ನೇ ಸಾಲಿಗೆ ಪದವಿ ಪೂರ್ವ ಶಿಕ್ಷಣ ಮತ್ತು ವೃತ್ತಿ ಶಿಕ್ಷಣ ಇಲಾಖೆಗೆ (ರಾಜ್ಯ ವಲಯ ಯೋಜನೆಗಳು) ಸಂಬಂಧಿಸಿದಂತೆ ಮುಂದುವರಿಕೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥರಿಗೆ ಅನುಮತಿ ನೀಡಲಾಗಿದೆ.

2. ಮೇಲೆ (2) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ, ಯೋಜನಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಒದಗಿಸಲಾದ ಅನುದಾನದಲ್ಲಿ ಮೊದಲನೇ ತ್ರೈಮಾಸಿಕ ಅನುದಾನವನ್ನು ಬಿಡುಗಡೆ ಮಾಡುವ ಮಾರ್ಗ ಸೂಚಿಯನ್ನು ನೀಡಲಾಗಿದೆ.

3. ಮೊದಲನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಮಾಡುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 86 ಯೋಯೋಕ 2011, ಬೆಂಗಳೂರು ದಿನಾಂಕ :08-04-2011.**
**[ ಇಡಿ : 29 ಸ್ವೀಮರ(ಯುನಿಕ್) 2011, ದಿನಾಂಕ : 08-04-2011 ]**

4. ಪದವಿ ಪೂರ್ವ ಶಿಕ್ಷಣ ಮತ್ತು ವೃತ್ತಿ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಎಲ್ಲಾ ಮುಂದುವರಿಕೆ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ, ಅನುಬಂಧದಲ್ಲಿರುವ ಕಾರ್ಯಕ್ರಮಗಳಿಗೆ 2011-12ನೇ ಸಾಲಿಗೆ ಒದಗಿಸಲಾದ ಅನುದಾನದಲ್ಲಿ ಮೊದಲನೇ ತ್ರೈಮಾಸಿಕ ಕಂತಿನ ಅನುದಾನವನ್ನು ವೆಚ್ಚ ಮಾಡಲು

ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಮತ್ತು ವೃತ್ತಿ ಶಿಕ್ಷಣ ಇಲಾಖೆ ಬೆಂಗಳೂರು, ಇವರಿಗೆ ಅನುಮತಿ ನೀಡಿದೆ.

5. ಸದರಿ ಆದೇಶವನ್ನು ಆರ್ಥಿಕ ಇಲಾಖೆ ಆದೇಶ ಸಂಖ್ಯೆ :ಆಇ : 1 : ಟಿಎಫ್‌ಪಿ 2010 ದಿನಾಂಕ:20-04-2010ರಲ್ಲಿ ಇಲಾಖಾ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಏ.ಎಫ್. ಮಾಗಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ).

ಗೆ,

1. ಮಹಾಲೇಖಪಾಲಕರು, ಕರ್ನಾಟಕ (ಆಡಿಟ್ 1 & 2) ಬೆಂಗಳೂರು.
2. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು,ವೃತ್ತಿ ಶಿಕ್ಷಣ ಇಲಾಖೆ, ಬೆಂಗಳೂರು.
4. ನಿರ್ದೇಶಕರು, ಖಜಾನಾ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಬೆಂಗಳೂರು.
5. ಉಪನಿರ್ದೇಶಕರು, ಖಜಾನಾ ಗಣಕ ಕೇಂದ್ರ, ನಂ.49, ಖನಿಜ ಭವನ, ರೇಸ್ ಕೋರ್ಸ್‌ರಸ್ತೆ, ಬೆಂಗಳೂರು.
6. ಸರ್ಕಾರದ ಉಪಕಾರ್ಯದರ್ಶಿ-2, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
7. ಸರ್ಕಾರದ ಉಪಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ, ಬೆಂಗಳೂರು.
8. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಶಿಕ್ಷಣ ಇಲಾಖೆ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳು.
10. ಕೋ. ಆರ್ಡಿನೇಟರ್, ಮಾಹಿತಿ ಕೇಂದ್ರ, ಶಿಕ್ಷಣ ಇಲಾಖೆ, ಬೆಂಗಳೂರು.
11. ಸಾಪ್ತಾಹಿಕ ರಾಜ್ಯ ಪತ್ರ/ ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಸರ್ಕಾರದ ಆದೇಶ ಸಂಖ್ಯೆ ಇಡಿ 86 ಯೋಯೋಕ 2011, ದಿನಾಂಕ-08-04-2011ಕ್ಕೆ ಅನುಬಂಧ

ಪದವಿ ಪೂರ್ವ ಶಿಕ್ಷಣ ಮತ್ತು ವೃತ್ತಿ ಶಿಕ್ಷಣ ಇಲಾಖೆ-

[ರೂ.ಲಕ್ಷಗಳಲ್ಲಿ]

| ಕ್ರಸಂ | ಕಾರ್ಯಕ್ರಮದ ವಿವರ | ಲೆಕ್ಕಶೀರ್ಷಿಕೆ | 2011-12ನೇ ಸಾಲಿಗೆ ಒದಗಿಸಿರುವ ಅನುದಾನ | ಮೊದಲನೇ ಕಂತಾಗಿ ಬಿಡುಗಡೆ ಮಾಡುತ್ತಿರುವ ಅನುದಾನ |
|---|---|---|---|---|
| 1 | ನಿರ್ದೇಶನ ಮತ್ತು ಆಡಳಿತ | 2202-02-001-0-01, 002, 003, 011, 014, 020 | 56.00 | 14.00 |
| | | 2202-02-001-0-01-053 | 27.00 | 6.75 |
| 2 | ಪದವಿ ಪೂರ್ವ ಶಿಕ್ಷಣ (ಪರೀಕ್ಷೆ ಬಾಬ್ತು) ಶೈಕ್ಷಣಿಕ ಸುಧಾರಣೆ | 2202-02-108-0-01-059 | 200.00 | 50.00 |
| | | 2202-02-108-0-01-422 | 75.00 | 18.75 |
| | | 2202-02-108-0-01-423 | 75.00 | 18.75 |
| 3 | ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪೂರ್ವಭಾವಿ ಸೌಲಭ್ಯಗಳು ಕಲ್ಪಿಸುವಿಕೆ | 2202-02-109-0-06-125 | 172.50 | 43.13 |
| | | 2202-02-109-0-06-422 | 162.00 | 40.50 |
| | | 2202-02-109-0-06-423 | 65.50 | 16.38 |
| 4 | ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸಿಬ್ಬಂದಿಗಳ ವೇತನ | [2202-02-109-0-13] | 13550.00 | 3387.50 |
| 5 | ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ ಸರ್ಕಾರೇತರ ಶುಲ್ಕ ಮರು ಪಾವತಿ | [2202-02-800-01-05-106] | 200.00 | 50.00 |
| 6 | ಸರ್ಕಾರಿ ಪದವಿಪೂರ್ವ ಕಾಲೇಜುಗಳ ಕಟ್ಟಡ ನಿರ್ಮಾಣಕ್ಕಾಗಿ | 4202-01-203-1-07-386 | 500.00 | 125.00 |
| | | 4202-01-203-1-07-422 | 3890.13 | 972.53 |
| | | 4202-01-203-1-07-423 | 500 | 125.00 |
| | | 4202-01-203-1-07-436 | 964.87 | 241.22 |
| 7 | ಸರ್ಕಾರಿ ಪದವಿ ಪೂರ್ವಕಾಲೇಜುಗಳಲ್ಲಿ ಗಣಕ ಶಿಕ್ಷಣದ ಸಾಕ್ಷರತೆ | [2202-80-800-0-23] | 2000.00 | 500.00 |
| | | ಒಟ್ಟು | 22438.00 | 5609.50 |
| ವೃತ್ತಿ ಶಿಕ್ಷಣ ಇಲಾಖೆ:- | | | | |
| 1 | ಸೆಕೆಂಡರಿ ಶಿಕ್ಷಣದ ವೃತ್ತೀಕರಣ | [2202-02-800-4-00-015] | 1400.00 | 350.00 |

(ಎ.ಎಫ್. ಮಾಗಿ)

ವಿಶೇಷಾಧಿಕಾರಿ ಹಾಗೂ ಪದನಿಮಿತ್ತ

ಸರ್ಕಾರದ ಅಧೀನ ಕಾರ್ಯದರ್ಶಿ,

ಶಿಕ್ಷಣ ಇಲಾಖೆ (ಯೋಜನೆ).

ಕರ್ನಾಟಕ ಸರ್ಕಾರ

ಸಂಖ್ಯೆ:ಪಪೂಶಿಇ/ಶೈ-ಶಾ/ಮೂಸೌ/ಅ-ಬಿ/02/2011-12

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, 18ನೇ ಕ್ರಾಸ್,
ಮಲ್ಲೇಶ್ವರಂ, ಬೆಂಗಳೂರು-12,
ದಿನಾಂಕ: 15 -06-2011.

## ಜ್ಞಾಪನ

ವಿಷಯ:- 2011-12ನೇ ಸಾಲಿಗೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು **ವಿಶೇಷ ಯೋಜನೆ** (ಎಸ್.ಸಿ.ಪಿ) ಯೋಜನೆಯಡಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಇಡಿ 86 ಯೋಯೋಕ 2011 ದಿನಾಂಕ 8-4-2011(ಇಡಿ 29 ಸ್ಕೀಮರ (ಯುನಿಕ್) 2011 ದಿನಾಂಕ:8-4-11)

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಮೂಲಭೂತ ಸೌಕರ್ಯಗಳನ್ನು (ಪೀಠೋಪಕರಣ, ಪಾಠೋಪಕರಣ ಡೆಸ್ಕ್/ಟೇಬಲ್/ಕುರ್ಚಿಗಳು/ ಅಲ್ಮೇರಾಗಳು/ವಿಜ್ಞಾನ ವಿಭಾಗಕ್ಕೆ ಪ್ರಯೋಗಾಲಯ ಉಪಕರಣಗಳು) ಒದಗಿಸುವ ಸಲುವಾಗಿ 2011-12 ನೇ ಸಾಲಿಗೆ **ವಿಶೇಷ ಯೋಜನೆ (ಎಸ್‌ಸಿಪಿ) ಯೋಜನೆಯಡಿ,** ಲೆಕ್ಕ ಶೀರ್ಷಿಕೆ 2202-02-109-0-06-422 ಯೋಜನೆಯಡಿ ರೂ.**162.00** ಲಕ್ಷಗಳ ಅನುದಾನವನ್ನು ಇಲಾಖೆಗೆ ಒದಗಿಸಲಾಗಿರುತ್ತದೆ. ಉಲ್ಲೇಖಿತ ಸರ್ಕಾರದ ಆದೇಶದಲ್ಲಿ **ಮೊದಲನೇ ತ್ರೈ**-ಮಾಸಿಕ ಅನುದಾನವಾಗಿ ರೂ40.50 ಲಕ್ಷಗಳನ್ನು ಸದರಿ ಉದ್ದೇಶಕ್ಕೆ ಬಳಸಿಕೊಳ್ಳಲು ಅನುಮತಿ ನೀಡಲಾಗಿದೆ. ಸದರಿ ಅನುದಾನದಲ್ಲಿ ಮೊದಲನೇ ಕಂತಿನ ಅನುದಾನವಾಗಿ ರೂ.**40.00** ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ವಿವರವನ್ನು ಈ ಜ್ಞಾಪನಕ್ಕೆ ಲಗತ್ತಿಸಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಅವುಗಳ ಮುಂದೆ ತೋರಿಸಿರುವಂತೆ (ಅನುಬಂದ-1ರಲ್ಲಿ ತಿಳಿಸಿರುವ 51 ಕಾಲೇಜುಗಳಿಗೆ) ಹಣವನ್ನು ಡೆಸ್ಕ್/ಟೇಬಲ್/ಕುರ್ಚಿಗಳು/ ಅಲ್ಮೇರಾಗಳಿಗೆ ಹಾಗೂ ವಿಜ್ಞಾನ ವಿಭಾಗದ ಪ್ರಯೋಗಾಲಯ ಉಪಕರಣಗಳಿಗೆ ಇವುಗಳಲ್ಲಿ **ಕಾಲೇಜಿಗೆ ಯಾವುದು ಅವಶ್ಯಕತೆ ಇದೆಯೋ ಆ ಉದ್ದೇಶಕ್ಕೆ** ಬಳಸಿಕೊಳ್ಳಲು ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಮಂಜೂರು ಮಾಡಲಾಗಿದೆ.

**ಷರತ್ತುಗಳು:**

1. ಪೀಠೋಪಕರಣ, ಪಾಠೋಪಕರಣ ಖರೀದಿಸುವ ಮುನ್ನ ಕಾಲೇಜಿನ ಪ್ರಾಂಶುಪಾಲರು, ಸಂಬಂಧಿಸಿದ ಬೋಧಕರು ಹಾಗೂ ಶಾಲಾಭಿವೃದ್ಧಿ ಸಮಿತಿಯ ಸದಸ್ಯರು ಒಳಗೊಂಡ ಖರೀದಿ ಸಮಿತಿಯು ಬಾಕ್ಸ್ ಟೈಪ್ ಡೆಸ್ಕ್‌ಗಳನ್ನು/ರಿವರ್ಸಬಲ್ ಡೆಸ್ಕ್ ಅಗತ್ಯವಾದ ಇತರೆ ಪೀಠೋಪಕರಣ, ಪಾಠೋಪಕರಣಗಳನ್ನು ಹಾಗೂ ಪ್ರಯೋಗಾಲಯದ ಉಪಕರಣಗಳನ್ನು ಪರಿಶೀಲಿಸಿ ಖರೀದಿಸತಕ್ಕದ್ದು.
2. ಪಾರದರ್ಶಕತೆ ನಿಯಮಾನುಸಾರ ರೂ.1,00,000-00 ಕ್ಕಿಂತ ಹೆಚ್ಚಿನ ಖರೀದಿಯನ್ನು ಟೆಂಡರ್ ಮೂಲಕ ಹಾಗೂ ರೂ. 1,00,000-00 ಕ್ಕಿಂತ ಕಡಿಮೆ ಮೊತ್ತದ ಖರೀದಿಯನ್ನು ಕೊಟೇಷನ್ ಪಡೆದು ನಿಯಮಾನುಸಾರ ಅತೀ ಕಡಿಮೆ ದರವನ್ನು ಸೂಚಿಸಿರುವ ಸರಬರಾಜುದಾರರ ಮೂಲಕ ಖರೀದಿಸತಕ್ಕದ್ದು.
3. ನಿಯಮಾನುಸಾರ ಖರೀದಿಸಬೇಕಾದ ಪೀಠೋಪಕರಣ, ಪಾಠೋಪಕರಣಗಳನ್ನು (Description and Specification) ಗಳನ್ನು ನಮೂದಿಸಿ ಸರಬರಾಜುದಾರರಿಂದ ಟೆಂಡರ್/ಕೊಟೇಷನ್‌ಗಳನ್ನು ಕರೆಯತಕ್ಕದ್ದು. ಈ ಮಾದರಿಯಲ್ಲಿ ಟೆಂಡರ್/ಕೊಟೇಷನ್ ಕರೆದಿರುವುದನ್ನು ಇಲಾಖೆಯ ತಪಾಸಣೆ ಸಮಯದಲ್ಲಿ ಪರಿಶೀಲನೆಗೆ ಒಳಪಡಿಸುವುದು.

. . .2

4. ಖರೀದಿಯು Description and Specification ಗೆ ಅನುಗುಣವಾಗಿರುವುದೇ ಎಂಬ ಬಗ್ಗೆ ದೃಢೀಕರಣ ಪತ್ರ ನೀಡತಕ್ಕದ್ದು.
5. ಸಂಬಂಧಿಸಿದ ಸರಬರಾಜುದಾರರಿಂದ ಬಿಲ್ಲುಗಳನ್ನು ನಾಲ್ಕು ಪ್ರತಿಗಳಲ್ಲಿ ಪಡೆಯತಕ್ಕದ್ದು ಹಾಗೂ ಖರೀದಿಸಿದ ಸಾಮಾನುಗಳನ್ನು ಉತ್ತಮ ಸ್ಥಿತಿಯಲ್ಲಿರುವ ಬಗ್ಗೆ ಹಾಗೂ ಸಂಬಂಧಿಸಿದ ದಾಸ್ತಾನು ಪುಸ್ತಕದಲ್ಲಿ ನಮೂದಿಸಿರುವ ಬಗ್ಗೆ ದಾಸ್ತಾನು ಪ್ರಮಾಣ ಪತ್ರ (Stock Certificate) ಗಳನ್ನು ಬಿಲ್ಲುಗಳ ಹಿಂಬದಿಯಲ್ಲಿ ದಾಖಲಿಸತಕ್ಕದ್ದು.
6. ಖರೀದಿಸಿದ ವಸ್ತುಗಳಿಗೆ ಒಂದೇ ಬಾರಿಗೆ ಡಿಸಿ ಬಿಲ್ಲನ್ನು ನಾಲ್ಕು ಪ್ರತಿಗಳಲ್ಲಿ ಪ್ರಾಂಶುಪಾಲು ಸಿದ್ದಪಡಿಸತಕ್ಕದ್ದು. ಡಿಸಿ ಬಿಲ್ಲಿನಲ್ಲಿ ಲೆಕ್ಕಶೀರ್ಷಿಕೆಯ ವಿವರಗಳನ್ನು ಸರಿಯಾಗಿ ನಮೂದಿಸಲಾಗಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳತಕ್ಕದ್ದು.
7. ಬಿಡುಗಡೆಯಾದ ಅನುದಾನವು ರೂ. <u>1 ಲಕ್ಷದ ಒಳಗೆ ಇದ್ದಲ್ಲಿ ಪ್ರಾಚಾರ್ಯರು ಕೊಟೇಷನ್ ಮುಖಾಂತರ ಜೂನ್ 25ರ ಒಳಗೆ ಖರೀದಿ ಪ್ರಕ್ರಿಯೆ ಪೂರೈಸುವುದು.</u> ಯಾವುದೇ ಕಾರಣಕ್ಕೂ ಈ ಅನುದಾನವು Lapse ಆಗದಂತೆ ಬಳಸಿಕೊಳ್ಳಲು ಸೂಚಿಸಿದೆ. Lapse ಆದ ಪಕ್ಷದಲ್ಲಿ ಆಯಾ ಕಾಲೇಜುಗಳ ಪ್ರಾಂಶುಪಾಲರ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು. ಈ ಆದೇಶ ತಲುಪಿದ ಕೂಡಲೆ ನಿಯಮಾನುಸಾರ ಖರೀದಿಸುವುದು. ಖರೀದಿ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಅಥವಾ ಸೂಚನೆಗಳನ್ನು ನಿರ್ಲಕ್ಷಿಸಿದಲ್ಲಿ ಸಂಬಂಧಿಸಿದ ಪ್ರಾಂಶುಪಾಲರನ್ನು ನೇರ ಹೊಣೆಗಾರರನ್ನಾಗಿಸಿ ಶಿಸ್ತು ಕ್ರಮ ಜರುಗಿಸಲಾಗುವುದು.
8. ಸಂಬಂಧಿಸಿದ ಉಪನಿರ್ದೇಶಕರು ತಮ್ಮ ಜಿಲ್ಲಾ ವ್ಯಾಪ್ತಿಗೆ ಒಳಪಟ್ಟ ಪ್ರಾಂಶುಪಾಲರು ಮೇಲ್ಕಂಡ ಸೂಚನೆಗಳನ್ನು ಪಾಲಿಸಿರುವ ಬಗ್ಗೆ ಎಚ್ಚರಿಕೆಯಿಂದ ಗಮನಿಸುವುದು. ತಮ್ಮ ಜಿಲ್ಲಾ ವ್ಯಾಪ್ತಿಗೆ ಒಳಪಟ್ಟ ಕಾಲೇಜುಗಳಿಗೆ ಸದರಿ ಆದೇಶದಲ್ಲಿ ಬಿಡುಗಡೆ ಮಾಡಿರುವ ಒಟ್ಟು ಮೊತ್ತವನ್ನು ಸಂಪೂರ್ಣವಾಗಿ ಬಳಕೆ ಮಾಡಿ, ಬಳಕೆ ಪ್ರಮಾಣ ಪತ್ರವನ್ನು ಈ ಕಛೇರಿಯ ಜಂಟಿ ನಿರ್ದೇಶಕರು(ಪರೀಕ್ಷೆ), ಇವರಿಗೆ ತಪ್ಪದೇ ಜೂನ್ 30, 2011ರೊಳಗೆ ಕಳುಹಿಸತಕ್ಕದ್ದು. ಹೊಸ ಕಾಲೇಜುಗಳಿಗೆ ಒಂದು ವೇಳೆ ಅನುದಾನ ಡ್ರಾ ಮಾಡಲು ಡ್ರಾಯಿಂಗ್ ಕೋಡ್ ಇನ್ನು ಇಲಾಖೆಯಿಂದ ಬಂದಿಲ್ಲವಾದರೆ ಆಯಾ ಜಿಲ್ಲಾ ಉಪನಿರ್ದೇಶಕರು ಅಂತಹ ಕಾಲೇಜಿನ ಅನುದಾನವನ್ನು ಡ್ರಾಮಾಡಿ ಖರೀದಿಸಿದ ವಸ್ತುಗಳು ಸರಬರಾಜುದಾರರಿಂದ ಸರಬರಾಜು ಆಗಿರುವುದನ್ನು ಪರಿಶೀಲಿಸಿ ನೇರವಾಗಿ ಪಾವತಿಸಲು ಕ್ರಮ ಕೈಗೊಳ್ಳುವುದು. ಹೊಸದಾಗಿ ವಿಜ್ಞಾನ ವಿಭಾಗ ಮಂಜೂರಾಗಿರುವ ಕಾಲೇಜುಗಳಿಗೆ ಪ್ರಾಯೋಗಾಲಯಕ್ಕೆ ಅನುದಾನ ಮಂಜೂರು ಮಾಡಿದ್ದಲ್ಲಿ ಹಾಗೂ ಪ್ರಸಕ್ತ ಸಾಲಿನಲ್ಲಿ ವಿದ್ಯಾರ್ಥಿಗಳು ದಾಖಲಾಗಿಲ್ಲವಾಗಿದ್ದಲ್ಲಿ ಅಂತಹ ಕಾಲೇಜಿನವರು ಕೂಡಲೇ ಈ ಇಲಾಖೆಯ ಜಂಟಿ ನಿರ್ದೇಶಕರು(ಪರೀಕ್ಷೆ) ಇವರಿಗೆ ಮಾಹಿತಿ ನೀಡುವುದು. ಸರ್ಕಾರದ ಕಾರ್ಯದರ್ಶಿಗಳ ಸಮ್ಮುಖದಲ್ಲಿ ನಡೆಯಲಿರುವ ಮಾಸಿಕ (MPIC) ವೆಚ್ಚದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಬಗ್ಗೆ ಕ್ರೋಢೀಕೃತ ಮಾಹಿತಿಯನ್ನು ಸಲ್ಲಿಸಬೇಕಾಗಿರುತ್ತದೆ. ಆದ್ದರಿಂದ ಸಂಬಂಧಿಸಿದ ಉಪನಿರ್ದೇಶಕರು ತಮ್ಮ ಜಿಲ್ಲೆಯ ವೆಚ್ಚದ ವರದಿಯನ್ನು ಜಂಟೀ ನಿರ್ದೇಶಕರು (ಪರೀಕ್ಷೆ) ಇವರಿಗೆ ಸಲ್ಲಿಸಲು ಮತ್ತೊಮ್ಮೆ ಸೂಚಿಸಿದೆ.

9. ಬಿಡುಗಡೆಯಾದ ಅನುದಾನವನ್ನು ಮೇಲೆ ತಿಳಿಸಿರುವ ಬಾಬ್ತುಗಳಿಗೆ ಮಾತ್ರ ಬಳಸತಕ್ಕದ್ದು.

10. ಬಿಡುಗಡೆಯಾದ ಅನುದಾನದಲ್ಲಿ ಖರೀದಿಸಿದ ಪೀಠೋಪಕರಣ, ಪ್ರಾಯೋಗಿಕ ಉಪಕರಣಗಳ ಹೆಸರು, ಸಂಖ್ಯೆ, ತಗಲಿದ ಒಟ್ಟು ವೆಚ್ಚದ ವಿವರಗಳನ್ನೊಳಗೊಂಡ ವರದಿಯನ್ನು ಇಲಾಖೆಯ ಜಂಟಿ ನಿರ್ದೇಶಕರು ಪರೀಕ್ಷೆ ಇವರಿಗೆ ಕಳುಹಿಸತಕ್ಕದ್ದು ಸರಬರಾಜಾದ ಉಪಕರಣ/ ಸಾಧನ ಪೀಠೋಪಕರಣಗಳ ಸಂಖ್ಯೆ ಅಥವಾ ಗುಣಮಟ್ಟದಲ್ಲಿ ಯಾವುದೇ ರೀತಿಯ ವ್ಯತಿರಿಕ್ತತೆ ಕಂಡುಬಂದಲ್ಲಿ ಈ ಸಂಬಂಧ ಪ್ರಾಂಶುಪಾಲರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.
11. ಪ್ರಯೋಗಶಾಲಾ ಉಪಕರಣಗಳನ್ನು ಖರೀದಿಸುವಾಗ ಸಬಂದಿಸಿದ ಉಪನ್ಯಾಸಕರಿಂದ ಅವಶ್ಯಕತೆ ಇರುವ ವಸ್ತುಗಳ ಬೇಡಿಕೆ ಪಟ್ಟಿಯನ್ನು ಪಡೆದು ನಂತರ ಖರೀದಿಸುವುದು.
12. ಪೀಠೋಪಕರಣ/ಪಾಠೋಪಕರಣ/ಪ್ರಯೋಗಾಲಯದ ವಸ್ತುಗಳು ಖರೀದಿಸುವಾಗ ವಸ್ತುಗಳ ದರಗಳು ಮತ್ತು ಖರೀದಿಸುವ ವಸ್ತುಗಳ ಗುಣಮಟ್ಟ ಆಯಾ ಜಿಲ್ಲೆಗಳಲ್ಲಿ ಏಕ ರೂಪ ಇರುವಂತೆ ಆಯಾ ಜಿಲ್ಲಾ ಉಪನಿರ್ದೇಶಕರು ಕಡ್ಡಾಯವಾಗಿ ಕ್ರಮ ತೆಗೆದುಕೊಳ್ಳುವುದು. ಈ ಸಂಬಂಧ ಪ್ರಾಂಶುಪಾಲರಿಗೆ ಸೂಚನೆ ನೀಡಿ ತಕ್ಷಣ ಕ್ರಮ ಕೈಗೊಳ್ಳಲು ಈ ಮೂಲಕ ಸೂಚಿಸಿದೆ.

(ಸಹಿ)
ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ,

ಪ್ರತಿಗಳು:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು
3. ನಿರ್ದೇಶಕರು, ಸರಕು ಖರೀದಿ ಇಲಾಖೆ, 17ನೇ ಮಹಡಿ, ಯುಟಿಲಿಟಿ ಕಟ್ಟಡ, ಎಂಜಿ ರಸ್ತೆ, ಬೆಂಗಳೂರು.
4. ಸಂಬಂಧಿಸಿದ ಖಜಾನಾಧಿಕಾರಿಗಳಿಗೆ
5. ಲೆಕ್ಕಪತ್ರಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು
6. ಸಂಬಂಧಿಸಿದ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ ಸೂಕ್ತ ಕ್ರಮಕ್ಕಾಗಿ.
7. ಆಯವ್ಯಯ/ಲೆಕ್ಕಸಮನ್ವಯ ಅಧೀಕ್ಷಕರು
8. ಸಂಬಂಧಿಸಿದ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ.
9. ಕಛೇರಿ ಪ್ರತಿ.

15/06/2011

# GOVERNMENT OF KARNATAKA
## DEPARTMENT OF PRE UNIVERSITY EDUCATION
### AMOUNT SANCTIONED UNDER SCP SCHEME TO PURCHASE DESKS/FURNITURE & LAB EQUIPEMENTS FOR GOVT PU COLLEGES DURING 2010-11 FOR THE STATE

| SLNO | COL CD | COLLEGE NAME & ADDRESS | AMOUNT RELEASED |
|---|---|---|---|
| 1 | BB116 | GOVT PU COLLEGE<br>KONAGATTA DB PURA TQ<br>BANGALORE RURAL DT | 80000 |
| 2 | BB131 | GOVT PU COLLEGE<br>YANTAGANAHALLY NELMANGALA<br>BANGALORE RURAL DIST | 80000 |
| 3 | BB138 | GOVT PU COLLEGE<br>THOOBIGERE DB PURA TQ<br>BANGALORE RURAL DIST | 80000 |
| 4 | CC015 | GOVT PU COLLEGE<br>KUDLIGI<br>BELLARY DT 583135 | 80000 |
| 5 | CC020 | GOVT PU COLLEGE FOR GIRLS<br>HOSPET STATION ROAD<br>BELLARY DT 583201 | 80000 |
| 6 | CC060 | GOVT SSK GIRLS PU COLLEGE<br>HUVINAHADAGALI<br>BELLARY DT 583219 | 80000 |
| 7 | EE200 | GOVT PU COLLEGE<br>JALAVADA SINDAGI TQ<br>BIJAPUR DT | 80000 |
| 8 | EE201 | GOVT PU COLLEGE<br>KANNUR BIJAPUR TQ<br>BIJAPUR DT | 80000 |
| 9 | EE237 | GOVT PU COLLEGE<br>SASANUR B BAGEWADI TQ<br>BIJAPUR DIST | 80000 |
| 10 | EE240 | GOVT PU COLLEGE<br>BASAVANABAGEWADI<br>BIJAPUR DIST | 80000 |
| 11 | FF018 | GOVT PU COLLEGE<br>THANAKUSHNUR AURAD TQ<br>BIDAR DT 585436 | 80000 |
| 12 | FF134 | GOVT PU COLLEGE<br>HALAHALLI(K) BHALKI TQ<br>BIDAR DT | 80000 |
| 13 | GD015 | GOVT MOTHIVEERAPPA PU COL<br>PJ EXTN<br>DAVANGERE 577004 | 80000 |
| 14 | GD016 | GOVT EX-MUNICIPAL PU COL<br>KR MARKET ROAD<br>DAVANGERE 577001 | 80000 |
| 15 | GD031 | GOVT PU COLLEGE<br>MAYAKONDA<br>DAVANGERE TQ 577534 | 80000 |

15/06/2011

GOVERNMENT OF KARNATAKA
DEPARTMENT OF PRE UNIVERSITY EDUCATION
AMOUNT SANCTIONED UNDER SCP SCHEME TO PURCHASE DESKS/FURNITURE & LAB EQUIPEMENTS
FOR GOVT PU COLLEGES DURING 2010-11 FOR THE STATE

| SL NO | COL CD | COLLEGE NAME & ADDRESS | AMOUNT RELEASED |
|---|---|---|---|
| 16 | GD183 | GOVT PU COLLEGE<br>HOLESIRIGERE HARIHAR TQ<br>DAVANGERE DT 577516 | 70000 |
| 17 | GD282 | GOVT PU COLLEGE<br>SAVALANGA HONNALI TQ<br>DAVANGERE DT | 80000 |
| 18 | GG148 | GOVT PU COLLEGE<br>VV PURA HIRIYUR TQ<br>CHITRADURG DT 572144 | 80000 |
| 19 | GG170 | GOVT PU COLLEGE<br>ANIVALA HOSADURGA TQ<br>CHITRADURG DT 577554 | 80000 |
| 20 | GG184 | GOVT PU COLLEGE<br>DODDTEKALVATTI HOSDURG TQ<br>CHITRADURG DT 577533 | 80000 |
| 21 | HH044 | GOVT PU COLLEGE<br>MYLIMANE JOLDAL PO<br>CHIKMAGLUR 577130 | 80000 |
| 22 | HH059 | GOVT PU COLLEGE<br>CHANNIGA MUDIGERE TQ<br>CHIKMAGLUR DT | 50000 |
| 23 | HH073 | GOVT PU COLLEGE FOR GIRLS<br>KADUR<br>CHICKMAGALUR DT | 80000 |
| 24 | HH077 | GOVT PU COLLEGE<br>MALLENAHALLY<br>CHIKKAMAGALUR | 80000 |
| 25 | KK213 | GOVT PU COLLEGE<br>KAMALANAGAR ALAND TQ<br>GULBARGA DIST | 80000 |
| 26 | KK217 | GOVT PU COLLEGE<br>MALAKHED SEDAM TQ<br>GULBARGA DIST | 80000 |
| 27 | KK219 | GOVT PU COLLEGE<br>MASHYAL AFZALPUR TQ<br>GULBARGA DIST | 80000 |
| 28 | KY013 | GOVT PU COLLEGE<br>SHAHAPUR<br>YADGIR DT 585223 | 80000 |
| 29 | KY025 | GOVT PU COLLEGE FOR BOYS<br>GURMITKAL YADAGIR TQ<br>YADGIR DT 585214 | 80000 |
| 30 | KY083 | GOVT PU COLLEGE<br>KODEKAL SURAPURA TQ<br>YADGIR DT 585237 | 80000 |

GOVERNMENT OF KARNATAKA
DEPARTMENT OF PRE UNIVERSITY EDUCATION
AMOUNT SANCTIONED UNDER SCP SCHEME TO PURCHASE DESKS/FURNITURE & LAB EQUIPEMENTS
FOR GOVT PU COLLEGES DURING 2010-11 FOR THE STATE

| Sl NO | COL CD | COLLEGE NAME & ADDRESS | AMOUNT RELEASED |
|---|---|---|---|
| 31 | LL019 | GOVT PU COLLEGE<br>DODDMETIKURKE ARSIKERE TQ<br>HASSAN DT 573117 | 80000 |
| 32 | LL031 | GOVT HMS PU COLLEGE<br>BASAVAPATNA ARKALGUDU TQ<br>HASSAN DT 573113 | 80000 |
| 33 | LL141 | GOVT PU COLLEGE<br>KANATHUR ALUR TQ<br>HASSAN DT | 80000 |
| 34 | MC054 | GOVT PU COLLEGE<br>SADALI SIDLAGHATTA TQ<br>CHIKKABALLAPUR DT | 80000 |
| 35 | MC063 | GOVT PU COLLEGE<br>BATLAHALLI CHINTAMANI TQ<br>CHIKKABALLAPUR DT | 80000 |
| 36 | MC148 | GOVT PU COLLEGE<br>DIBBUR CHIKKABALLAPUR TQ<br>CHIKKABALLAPUR DT | 80000 |
| 37 | MM059 | GOVT PU COLLEGE<br>TEKAL MALUR TQ<br>KOLAR DT 563137 | 80000 |
| 38 | MM141 | GOVT PU COLLEGE<br>MUDIYANUR MULBAGAL TQ<br>KOLAR DIST | 80000 |
| 39 | MM146 | GOVT PU COLLEGE<br>MADANAHALLI CROSS<br>KOLAR DIST | 80000 |
| 40 | NC056 | GOVT PU COLLEGE FOR BOYS<br>CHAMARAJANAGAR<br>571313 | 80000 |
| 41 | NC066 | GOVT PU COLLEGE<br>VENKATAIAHNA CHATRA<br>C R NAGAR TQ 571147 | 80000 |
| 42 | RR006 | GOVT PU COLLEGE FOR GIRLS<br>DEODURG<br>RAICHUR DT 584111 | 80000 |
| 43 | RR027 | GOVT PU COLLEGE<br>SIRWAR MANVI TQ<br>RAICHUR DT 584129 | 80000 |
| 44 | RR028 | GOVT PU COLLEGE<br>GABBUR DEODURG TQ<br>RAICHUR DT 584113 | 80000 |
| 45 | RR162 | GOVT PU COLLEGE<br>JAVALAGERA SINDHANUR TQ<br>RAICHUR DIST | 80000 |

GOVERNMENT OF KARNATAKA
DEPARTMENT OF PRE UNIVERSITY EDUCATION
AMOUNT SANCTIONED UNDER SCP SCHEME TO PURCHASE DESKS/FURNITURE & LAB EQUIPEMENTS
FOR GOVT PU COLLEGES DURING 2010-11 FOR THE STATE

| S_NO | COL CD | COLLEGE NAME & ADDRESS | AMOUNT RELEASED |
|---|---|---|---|
| 46 | TT036 | GOVT PU COLLEGE<br>BH ROAD<br>SHIMOGA 577201 | 80000 |
| 47 | TT048 | GOVT PU COLLEGE<br>BASAVANI THIRTHAHALLI TQ<br>SHIMOGA DT 577432 | 50000 |
| 48 | TT104 | GOVT PU COLLEGE FOR GIRLS<br>BH ROAD<br>SHIMOGA 577201 | 80000 |
| 49 | UU011 | GOVT PU COLLEGE<br>GUBBI<br>TUMKUR DT 572216 | 70000 |
| 50 | UU037 | GOVT PU COLLEGE<br>KADABA GUBBI TQ<br>TUMKUR DT 572219 | 80000 |
| 51 | UU124 | GOVT PU COLLEGE<br>DANDINASHIVARA T KERE TQ<br>TUMKUR DT 572215 | 80000 |
| | | TOTAL Rs. | 40,00,000 |

Roshni N.
DIRECTOR
DEPT OF PU EDUCATION.